**ಪಾಠ–9** **ಮೇ 22–28**

# ಒಡಂಬಡಿಕೆ ಗುರುತು



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಪಾಠದ ಅಧ್ಯಯನಕ್ಕಾಗಿ ಓದಿರಿ :** ಆ.ಕಾಂಡ 2:2,3, ವಿ.ಕಾಂಡ 20:11, ವಿ.ಕಾಂಡ 16, ಇಬ್ರಿಯ 4:1–4, ವಿ.ಕಾಂಡ 31:12–17, ಧ.ಕಾಂಡ 5:14.

**ಸ್ಮರಣವಾಕ್ಯ : "ಆದುದರಿಂದ ಇಸ್ರಾಯೇಲ್ಯರು ಸಬ್ಬತ್ ದಿನವನ್ನು ಆಚರಿಸಬೇಕು. ಈ ಆಚರಣೆಯು ಅವರಿಗೂ ಅವರ ಸಂತತಿಯವರಿಗೂ ಶಾಶ್ವತವಾದ ನಿಬಂಧನೆ. ನನಗೂ ಇಸ್ರಾಯೇಲ್ಯರಿಗೂ ನಡುವೆ ಇದು ಸದಾಕಾಲವೂ ಗುರುತು"** (ವಿ.ಕಾಂಡ 31:16).

ಏಳನೆ ದಿನದ ಸಬ್ಬತ್ತು ತಪ್ಪದೆ ನಿಯಮಿತವಾಗಿ ನಮ್ಮನ್ನು ಪ್ರತಿವಾರವು ಎಲ್ಲದಕ್ಕೂ ಅಸ್ತಿವಾರವಾಗಿರುವುದರ ಕಡೆಗೆ ಮರಳಿ ಕಳುಹಿಸುತ್ತದೆ. ನಾವು ಹಿಂದೆ ಮುಂದೆ ಹೋಗುತ್ತಾಬರುತ್ತಾ ಕೆಲಸದಲ್ಲಿ ಬಹಳವಾಗಿ ನಿರತರಾಗಿರುತ್ತೇವೆ, ಹಣವನ್ನು ವ್ಯಯಿಸುತ್ತೇವೆ, ಸಂಪಾದಿಸುತ್ತೇವೆ. ಅಲ್ಲಿ, ಇಲ್ಲಿ ಎಲ್ಲಾಕಡೆ ಹೋಗುತ್ತೇವೆ ಅಷ್ಟರಲ್ಲಿ ಸಬ್ಬತ್ತು ಬಂದುಬಿಡುತ್ತದೆ. ಮತ್ತೆ ನಮ್ಮನ್ನು ನಮ್ಮ ಅಸ್ತಿವಾರಕ್ಕೆ ಸೇರಿಸುತ್ತದೆ. ಯಾಕೆಂದರೆ ದೇವರು ನಮ್ಮನ್ನೂ ಸಮಸ್ತವನ್ನೂ ಸೃಷ್ಟಿಸಿದನು.

ಕ್ರಮಬದ್ಧವಾಗಿ ಯಾವುದೇ ವಿನಾಯಿತಿ ಇಲ್ಲದೆ, ಅವ್ಯಾಹತವಾಗಿ ಸಬ್ಬತ್ತು ಸದ್ದಿಲ್ಲದೆ ನಮ್ಮ ಜೀವನದ ಎಲ್ಲಾ ಕ್ಷೇತ್ರಕ್ಕೆ ಪ್ರವೇಶಿಸುತ್ತದೆ. ನಮ್ಮನ್ನು ಉಂಟುಮಾಡಿ

* ಈ ವಾರದ ಪಾಠವನ್ನು ಮೇ 29ರ ಸಬ್ಬತ್ತಿಗೆ ಅಧ್ಯಯನ ಮಾಡಿರಿ ಮತ್ತು ಸಿದ್ಧಪಡಿಸಿಕೊಳ್ಳಿರಿ.

ಇಲ್ಲಿ ಇರಿಸಿರುವ ನಮ್ಮ ಸೃಷ್ಟಿಕರ್ತನಿಗೆ ಸರ್ವಸ್ವವೂ ಸೇರಿದೆಯೆಂದು ಸಬ್ಬತ್ತು ನಮ್ಮ ಜ್ಞಾಪಕಕ್ಕೆ ತರುತ್ತದೆ. ಆತನು ಭೂಮ್ಯಾಕಾಶಗಳನ್ನೂ ಅದರಲ್ಲಿರುವ ಸಮಸ್ತವನ್ನು ಉಂಟುಮಾಡಿರುವ ಕೆಲಸವು ಕ್ರೈಸ್ತ ನಂಬಿಕೆಗೆ ಆಧಾರವಾಗಿ ಉಳಿದಿದೆ. ಅದಕ್ಕೆ ಸಂಬಂಧಪಡುವುದೇ ಏಳನೇ ದಿನದ ಸಬ್ಬತ್ತು. ಇದು ಅಲ್ಲಗಳೆಯಲಾಗದ, ಕಣ್ಣಿಗೆ ಕಾಣದ, ಮಣಿಯದ ಒಂದು ಗುರುತಾಗಿದೆ.

ಸಿನಾಯಿ ಒಡಂಬಡಿಕೆಗೆ ಸಂಬಂಧಪಟ್ಟ ಹಾಗೆ ಈ ಒಂದು ಗುರುತಿನ ಬಗ್ಗೆ ಈ ವಾರ ನಮ್ಮ ಗಮನವನ್ನು ಹರಿಸುತ್ತೇವೆ.

**ವಾರದ ಪಕ್ಷಿನೋಟ :** ಸಬ್ಬತ್ತಿನ ಮೂಲ ಯಾವುದಾಗಿದೆ? ಸಿನಾಯಿಗಿಂತಲೂ ಮೊದಲೆ ಸಬ್ಬತ್ತು ಇತ್ತೆಂಬುದಕ್ಕೆ ಏನು ಪುರಾವೆಯಿದೆ? ಸಬ್ಬತ್ತನ್ನು ಒಡಂಬಡಿಕೆಗೆ ಸಮರ್ಪಕವಾದ ಗುರುತಾಗಿ ಮಾಡಿರುವುದು ಯಾವುದು?

**ಭಾನುವಾರ** **ಮೇ 24**

## ಮೂಲಗಳು

ನಾವು ಯಾವಾಗಲೂ "ಹಳೆಯ ಯೆಹೂದ್ಯರ ಸಬ್ಬತ್ತು" ಎಂಬ ಪದವೃಂದವನ್ನು ಕೇಳಿಸಿಕೊಳ್ಳುತ್ತಿರುತ್ತೇವೆ. ಆದಾಗ್ಯೂ, ಸಬ್ಬತ್ತು ಯೆಹೂದ್ಯರು ಬರುವುದಕ್ಕೆ ಮುಂಚಿನಿಂದಲೂ ಅಸ್ತಿತ್ವದಲ್ಲಿದೆ ಎಂಬುದನ್ನು ಸತ್ಯವೇದವು ಸ್ಪಷ್ಟಪಡಿಸುತ್ತದೆ. ಇದರ ಮೂಲವು ಸೃಷ್ಟಿಯ ಮೊದಲ ವಾರದಲ್ಲಿಯೇ ಕಂಡುಬರುತ್ತದೆ.

ಆದಿಕಾಂಡ 2:2,3 ಮತ್ತು ವಿ.ಕಾಂಡ 20:11 ನೋಡಿರಿ. ಅನುಮಾನಕ್ಕೆ ಎಡೆಕೊಡದೆ ಹಾಗೆ ಸ್ಪಷ್ಟವಾಗಿರುವ ಸಬ್ಬತ್ತಿನ ಮೂಲಸ್ಥಳ ಯಾವುದು?

ಆದಿಕಾಂಡ 2:2,3 ಏಳನೇ ದಿನದ ಸಬ್ಬತ್ತನ್ನು ಗುರುತಿಸಿಲ್ಲವಾದರೂ (ಈ ಗುರುತು ಮೊದಲಸಲಕ್ಕೆ ವಿಮೋಚನಕಾಂಡ 16:26,29ರಲ್ಲಿ ಬರುತ್ತದೆ). ಇಲ್ಲಿ 'ಆತನು ಏಳನೇ ದಿನದಲ್ಲಿ ವಿಶ್ರಮಿಸಿಕೊಂಡನು' ಎಂಬ ವಾಕ್ಯವು ಸ್ಪಷ್ಟವಾಗಿ ಸೂಚಿಸುತ್ತದೆ (ಆ.ಕಾಂಡ 2:2) ವಿಶ್ರಮಿಸಿಕೊಂಡನು ಎಂಬ ಪದವು (ಶಬಾಟ್– ಇಬ್ರಿಯ ಪದ) ಸಬ್ಬತ್ತು ಎಂಬ ನಾಮಪದಕ್ಕೆ ನಿಕಟವಾಗಿ ಸಂಬಂಧಪಡುತ್ತದೆ. ಸಬ್ಬತ್ತು ಎಂಬ ಪದವು ಆ.ಕಾಂಡ 2:2,3ರಲ್ಲಿ ಸಿಗುವುದಿಲ್ಲ. ಆದರೆ ಇದರ

ಬರಹಗಾರನು ದೇವರು ಏಳನೆಯ ದಿನವನ್ನು ಸಬ್ಬತ್ತಾಗಿ ಆಶೀರ್ವದಿಸಿ ಶುದ್ಧಪಡಿಸಿದನು ಎಂಬುದನ್ನು ದೃಢಪಡಿಸುವುದು ನಿಶ್ಚಯವಾಗಿದೆ– ಜಿ.ಎಫ್. ವಾಟರ್ಮನ್ 5ನೇ ಸಂಪುಟ, 183ನೇ ಪುಟ. ಆದಿಕಾಂಡ 2:2,3ನೇ ವಚನಗಳು ಮಾನವರಿಗೆ ಆಶೀರ್ವಾದದಾಯಕವಾದ ದಿನವಾಗಿ ಸಬ್ಬತ್ತು ದೇವರಿಂದಲೇ ಸ್ಥಾಪಿಸಲ್ಪಟ್ಟಿತು ಎಂಬುದನ್ನು ಸ್ಪಷ್ಟವಾಗಿ ಬೋಧಿಸುತ್ತದೆ.

ಮಾರ್ಕ 2:27ನ್ನು ಓದಿರಿ. 'ಸಬ್ಬತ್ತು ಮನುಷ್ಯರಿಗೋಸ್ಕರ ಉಂಟಾಯಿತು' ಎಂಬುದಾಗಿ ಯೇಸುಕ್ರಿಸ್ತನು ಕೇವಲ ಯೆಹೂದ್ಯರಿಗೆ ಮಾತ್ರವೆಂದು ಹೇಳದೆ ಇಡೀ ಮಾನವ ಜನಾಂಗಕ್ಕೆ ಸಬ್ಬತ್ತನ್ನು ಅನ್ವಯಮಾಡುತ್ತಾನೆ.

ದೇವರು 7ನೇ ದಿನದಲ್ಲಿ ಏಕೆ ವಿಶ್ರಮಿಸಿಕೊಂಡನು? ಆತನಿಗೆ ವಿಶ್ರಮಿಸಿಕೊಳ್ಳುವ ಅಗತ್ಯವಿದೆಯೆ? ಆತನು ವಿಶ್ರಮಿಸಿಕೊಂಡದ್ದು ಮತ್ತ್ಯಾವ ಉದ್ದೇಶವನ್ನು ಹೊಂದಿದೆ?

ಕೆಲವು ವ್ಯಾಖ್ಯಾನಕಾರರು ದೇವರಿಗೂ ಸಹಾ ಸೃಷ್ಟಿಕಾರ್ಯ ಮುಗಿಸಿದ ಮೇಲೆ ದೈಹಿಕವಾಗಿ ವಿಶ್ರಾಂತಿ ಅಗತ್ಯವಿತ್ತು ಎಂದು ಹೇಳಿದ್ದಾಗ್ಯೂ ದೇವರು ಮಾನವರಿಗೆ ಅಗತ್ಯವಾದ ದೈವೀಕ ಉದಾಹರಣೆ ಒದಗಿಸಲು ಹಾಗೆ ಮಾಡಿದನು. ಮನುಷ್ಯರೂ ಸಹಾ ದೇವರ ಹಾಗೆಯೇ ಆರುದಿನಗಳಲ್ಲಿ ಕೆಲಸ ಮಾಡಬೇಕು. ನಂತರ ಏಳನೇ ದಿನದ ಸಬ್ಬತ್ತಿನಲ್ಲಿ ವಿಶ್ರಾಂತಿ ಪಡೆದುಕೊಳ್ಳಬೇಕು.

ದೈವಶಾಸ್ತ್ರಜ್ಞರಾದ ಕಾರ್ಲ್‌ಬರ್ತ್ 'ದೇವರು ಕೃಪೆಯ ಒಡಂಬಡಿಕೆಯ ಭಾಗವಾಗಿ ಸೃಷ್ಟಿಕಾರ್ಯ ಮುಗಿಸಿದ ಮೇಲೆ ವಿಶ್ರಾಂತಿ ಪಡೆದುಕೊಂಡನು ಮತ್ತು ತನ್ನ ವಿಶ್ರಾಂತಿಯಲ್ಲಿ ಪಾಲ್ಗೊಳ್ಳುವಂತೆ ಮಾನವರೂ ಸಹಾ ಆಹ್ವಾನಿಸಲ್ಪಟ್ಟರು' – ಚರ್ಚ್ ಡಾಗ್‌ಮಾಟಿಕ್ಸ್, 3ನೇ ಸಂಪುಟ, 98ನೇ ಪುಟ.

ದೇವರು ಗಂಡಸು ಮತ್ತು ಹೆಂಗಸನ್ನು ವಿಶ್ರಾಂತಿಯಿಂದ ತನ್ನ ಅನ್ಯೋನ್ಯತೆಗೆ ಬರಬೇಕೆಂದು ಅವರು ಸೃಷ್ಟಿಯಾದ ನಂತರ ಪ್ರೀತಿಯಿಂದ ಕರೆದನು. ಯಾರ ಹೋಲಿಕೆಗೆ ಸರಿಯಾಗಿ ಮಾಡಲ್ಪಟ್ಟರೋ ಅವನ ಜೊತೆ ಒಂದು ನಿಕಟವಾದ ಸಂಪರ್ಕವನ್ನು ಸ್ಥಾಪಿಸಲು ಮತ್ತು ಅದು ಎಂದೆಂದಿಗೂ ಉಳಿದುಕೊಳ್ಳಬೇಕೆಂದು

ಕರೆದನು. ಮಾನವನು ಪಾಪದಲ್ಲಿ ಬಿದ್ದಾಗಿನಿಂದ ಸಬ್ಬತ್ತು ಒಬ್ಬನ ಜೀವಿತಕ್ಕೆ ಯೇಸುಕ್ರಿಸ್ತನ ಜೊತೆ ಉನ್ನತಸ್ಥಾನವನ್ನು ಕೊಡುತ್ತದೆ.

ಯಾರಾದರೊಬ್ಬರು, ಸಬ್ಬತ್ತನ್ನು ಕೈಗೊಂಡು ನಡೆಯುವುದರಿಂದ ದೇವರೊಂದಿಗಿನ ನಿಮ್ಮ ಸಂಬಂಧಕ್ಕೆ ಹೇಗೆ ಪ್ರಯೋಜನವಾಯ್ತು ಎಂದು ನಿಮ್ಮನ್ನು ಕೇಳಿದರೆ ನೀವು ಯಾವ ರೀತಿಯಲ್ಲಿ ಉತ್ತರಿಸುವಿರಿ?

**ಸೋಮವಾರ** **ಮೇ 24**

## ಸಿನಾಯಿಗಿಂತ ಮೊದಲು ಸಬ್ಬತ್ತು

ಇದು ಯಹೋವನು ಹೇಳಿದ ಮಾತು; ನಾಳೆ ವಿರಾಮ ಮಾಡಿಕೊಳ್ಳತಕ್ಕ ಯೆಹೋವನ ಪರಿಶುದ್ಧ ಸಬ್ಬತ್ ದಿನವಾಗಿದೆ. ಈ ಹೊತ್ತಿಗೆ ಸುಡಬೇಕಾದದ್ದನ್ನು ಸುಟ್ಟು ಬೇಯಿಸಬೇಕಾದದ್ದನ್ನು ಬೇಯಿಸಿದ ನಂತರ ಮಿಕ್ಕದ್ದನ್ನು ನಾಳೆಯ ತನಕ ಇಟ್ಟುಕೊಳ್ಳಿರಿ ಅಂದನು (ವಿ.ಕಾಂಡ 16:23).

ವಿಮೋಚನಕಾಂಡ 16ನೇ ಅಧ್ಯಾಯವನ್ನು ತ್ವರಿತವಾಗಿ ಓದಿರಿ, ಇದು ಸಿನಾಯಿಗಿಂತ ಮೊದಲು ಮರುಭೂಮಿಯಲ್ಲಿ ಇಸ್ರಾಯೇಲ್ಯರಿಗೆ ದೇವರು ಮನ್ನವನ್ನು ಕೊಟ್ಟ ಕಥೆಯಾಗಿದೆ. ಇದರ ವಿವರಣೆ ಏನನ್ನು ಅರಹುತ್ತದೆ ಗಮನಿಸಿರಿ:

1. ಪ್ರತಿನಿತ್ಯವು ಒಂದು ಗೊತ್ತಾದ ಪ್ರಮಾಣದಷ್ಟು ಮನ್ನವನ್ನು ಉಪಯೋಗಿಸ ಬೇಕಾಗಿತ್ತು. ಆದರೆ ಆರನೇ ದಿನದಲ್ಲಿ ಎರಡರಷ್ಟು ಮನ್ನವನ್ನು ಸಂಗ್ರಹ ಮಾಡಿಕೊಳ್ಳಬೇಕಾಗಿತ್ತು.
2. ಸಬ್ಬತ್ತಿನ ದಿನದಲ್ಲಿ ಮನ್ನವು ಕೊಡಲ್ಪಡುತ್ತಿರಲಿಲ್ಲ.
3. ಸಬ್ಬತ್ತಿನ ದಿನಕ್ಕೆ ಬೇಕಾದ ಹೆಚ್ಚುವರಿ ಮನ್ನವನ್ನು ಸಂಗ್ರಹಿಸಿಟ್ಟುಕೊಡದ್ದು ಕೆಟ್ಟುಹೋಗುತ್ತಿರಲಿಲ್ಲ. ಆದರೆ ಇನ್ನಿತರೆ ದಿನಗಳಲ್ಲಿ ಮನ್ನವನ್ನು ಸಂಗ್ರಹಿಸಿಟ್ಟುಕೊಳ್ಳುವಂತಿರಲಿಲ್ಲ.

ಸಿನಾಯಿ ಬೆಟ್ಟದಲ್ಲಿ ನ್ಯಾಯಪ್ರಮಾಣ ಕೊಡುವುದಕ್ಕೆ ಮೊದಲು ಸಬ್ಬತ್ತಿನ ಪರಿಶುದ್ಧತೆಯ ವಿಷಯ ಬಗ್ಗೆ ಈ ಕಥೆಯು ಏನನ್ನು ಪ್ರಕಟಪಡಿಸುತ್ತದೆ? (ವಿ.ಕಾಂಡ 23–28 ನೋಡಿರಿ).

"ಸಬ್ಬತ್ತು ಏಳನೇ ದಿನಕ್ಕೆ ಸಮೀಕರಣಗೊಂಡಿರುವುದು, ದೇವರೇ ಇಸ್ರಾಯೇಲ್ಯರಿಗೆ ಸಬ್ಬತ್ತು ಕೊಟ್ಟನೆಂಬ ವಿಷಯವು, ಜನರು ಏಳನೇ ದಿನದಲ್ಲಿ ದೇವರ ಆಜ್ಞೆಯಂತೆ ವಿಶ್ರಮಿಸಿಕೊಂಡರು ಎಂಬ ದಾಖಲೆ ಇವೆಲ್ಲವೂ ತಪ್ಪಿಲ್ಲದೆ ಸಬ್ಬತ್ತಿನ ಮೂಲವು ಸೃಷ್ಟಿ ಎಂಬುದನ್ನು ಬೆಟ್ಟು ಮಾಡಿತೋರಿಸುತ್ತವೆ" – ಜಿ.ಎಫ್. ವಾಟರ್‌ಮನ್, 5ನೇ ಸಂಪುಟ, 184ನೇ ಪುಟ.

ವಿಮೋಚನಕಾಂಡ 16ನೇ ಅಧ್ಯಾಯದಲ್ಲಿ ಸಬ್ಬತ್ತಿನ ಬಗ್ಗೆ ಮೊದಲು ಕಂಡದಕ್ಕಿಂತ ಹೆಚ್ಚು ವಿಷಯಗಳು ನಮಗೆ ಗೋಚರವಾಗುತ್ತವೆ. ಈ ವಚನಗಳು ನಮಗೆ ಉತ್ತರವನ್ನೂ ನೀಡುವ ಪ್ರಶ್ನೆಗಳನ್ನು ನೋಡೋಣ.

1. ಸಬ್ಬತ್ತಿಗೆ ಸಿದ್ಧಪಡಿಸಿಕೊಳ್ಳಬೇಕಾದ ದಿನ ಯಾವುದು?
2. ವಾರದ ಯಾವ ದಿನವು ಸಬ್ಬತ್ತಿನ ದಿನವಾಗಿದೆ?
3. ಸಬ್ಬತ್ತು ಎಲ್ಲಿಂದ ಬಂತು?
4. ಸಬ್ಬತ್ತು ಎಂತಹ ದಿನವಾಗಿರಬೇಕು?
5. ಸಬ್ಬತ್ತು ಉಪವಾಸ ಮಾಡಬೇಕಾದ ದಿನವೆ?
6. ಸಬ್ಬತ್ತು ದೇವರ ಮೇಲೆ ನಮಗಿರುವ ನಿಷ್ಠೆಯನ್ನು ಪರೀಕ್ಷಿಸುತ್ತದೆಯೆ?

ಈ ವಾರ ಸಬ್ಬತ್ತಿನ ಬಗ್ಗೆ ನಿಮಗಿರುವ ತಿಳುವಳಿಕೆಯು ವಿಮೋಚನಕಾಂಡ 16ನೇ ಅಧ್ಯಾಯ ಬೋಧನೆಗೆ ಹೇಗೆ ಸರಿಹೊಂದುತ್ತದೆ?

**ಮಂಗಳವಾರ** **ಮೇ 25**

## ಒಡಂಬಡಿಕೆಯ ಗುರುತು

ಆದುದರಿಂದ ಇಸ್ರಾಯೇಲ್ಯರು ಸಬ್ಬತ್ ದಿವಸವನ್ನು ಆಚರಿಸಬೇಕು. ಈ ಆಚರಣೆಯು ಅವರಿಗೂ ಅವರ ಸಂತತಿಯವರಿಗೂ ಶಾಶ್ವತವಾದ ನಿಬಂಧನೆ. ನನಗೂ ಇಸ್ರಾಯೇಲ್ಯರಿಗೂ ನಡುವೆ ಇದು ಸದಾಕಾಲವು ಗುರುತು. ಆರು ದಿನಗಳಲ್ಲಿ ಯೆಹೋವನು ಭೂಮ್ಯಾಕಾಶಗಳನ್ನುಂಟು ಮಾಡಿ ಏಳನೆಯ ದಿನದಲ್ಲಿ ಕೆಲಸವನ್ನು ಮಾಡದೆ ವಿಶ್ರಮಿಸಿಕೊಂಡನಲ್ಲವೇ (ವಿ.ಕಾಂಡ 31:16,17).

ಸತ್ಯವೇದದಲ್ಲಿ ಒಟ್ಟಾರೆ ನಾಲ್ಕು ಸಲ ಸಬ್ಬತ್ತು "ಗುರುತು" ಎಂಬುದಾಗಿ ಸ್ಪಷ್ಟವಾಗಿ ಹೇಳುವುದನ್ನು ನೋಡುತ್ತೇವೆ (ವಿ.ಕಾಂಡ 31:16,17; ಯೆಹೆ 20:12,

20). ಗುರುತು ಮತ್ತು ಸಂಕೇತ ಎರಡು ಪದಗಳು ಒಂದೇ ತರದ ಗುಣವನ್ನು ಹಂಚಿಕೊಂಡಿವೆ. ಯಾವುದೋ ಒಂದನ್ನು ಸ್ವಾಭಾವಿಕವಾಗಿ ಪ್ರತಿಬಿಂಬಿ–ಸುವುದರಿಂದ ಅಥವಾ ನೆನಪಿಗೆ ತರುವ ರೀತಿಯಿಂದ ಗುರುತು ಎಂಬುದನ್ನು ಸಂಕೇತವೆಂದು 'ಗುರುತು' ಯಾವುದೋ ಒಂದನ್ನು ಸ್ವಾಭಾವಿಕವಾಗಿ ಪ್ರತಿನಿಧಿಸುವುದರಿಂದ ಅಥವಾ ನಮ್ಮ ನೆನಪಿಗೆ ತರುವುದರಿಂದ ಅದನ್ನು ಸಂಕೇತವೆಂದುಕೊಳ್ಳಬಾರದು. ಸತ್ಯವೇದದಲ್ಲಿ 'ಗುರುತು' ಬಹಿರಂಗವಾಗಿ ಕಾರ್ಯವೆಸಗುವ ಚಿಹ್ನೆಯಾಗಿದೆ ಅಥವಾ ವಸ್ತುವಾಗಿದೆ ಅಥವಾ ಒಂದು ವಿಶಿಷ್ಟವಾದ ಸಂದೇಶವನ್ನು ತಿಳಿಯಪಡಿಸುವ ಸ್ಥಿತಿಯಾಗಿದೆ. ಇನ್ನೊಂದಕ್ಕೆ ಗುರುತಾಗಿರುವ ಯಾವುದೂ ಒಡಂಬಡಿಕೆಗೆ ಗುರುತಾಗಿರಲು ಸಾಧ್ಯವಿಲ್ಲ. ಆದುದರಿಂದ ಸಬ್ಬತ್ತು ನನಗೂ ನಿಮಗೂ ನಿಮ್ಮ ಸಂತತಿಯವರಿಗೂ ಇರುವ ಗುರುತು– ವಿ.ಕಾಂಡ 31:13 ದೇವರೇ ಇದನ್ನು ಹೇಳಿರುವುದರಿಂದ ಇದು ಸತ್ಯವಾಗಿದೆ.

ದೇವರು ಸಬ್ಬತ್ತನ್ನು ಒಡಂಬಡಿಕೆಯ ಗುರುತಾಗಿ ಏಕೆ ಉಪಯೋಗಿಸಿದ್ದಾನೆ? ದೇವರ ರಕ್ಷಣೆಯ ಸಂಬಂಧಕ್ಕೆ ತಕ್ಕ ಗುರುತಾಗಿರುವಂತದ್ದು ಸಬ್ಬತ್ತಿನಲ್ಲಿ ಏನಿದೆ? ಒಡಂಬಡಿಕೆಯ ನಿರ್ಣಾಯಕ ಅಂಶವನ್ನು ಜ್ಞಾಪಕ ಮಾಡುವಾಗ ನಾವು ಕೃಪೆಯಿಂದ ರಕ್ಷಿಸಲ್ಪಟ್ಟಿದ್ದೇವೆ. ಆದರೆ ಕ್ರಿಯೆಗಳು ನಮ್ಮನ್ನು ರಕ್ಷಿಸಲಾರವು. ನಮ್ಮ ಸಂಬಂಧಕ್ಕೆ ಉತ್ತಮವಾದ ಸಂಕೇತವಾಗಿರಲು ಸಬ್ಬತ್ತಿನಲ್ಲಿ ಏನಿದೆ? (ಆ.ಕಾಂಡ 2:3, ಇಬ್ರಿ 4:1–4 ನೋಡಿರಿ).

ಬಹಳ ಶತಮಾನಗಳಿಂದಲೂ ಯೆಹೂದ್ಯರು ಸಬ್ಬತ್ತನ್ನು ಯೇಸುಕ್ರಿಸ್ತನಿಂದ ಉಂಟಾಗುವ ರಕ್ಷಣೆಗೆ ಒಂದು ಗುರುತಾಗಿದೆಯೆಂದು ತಿಳಿದಿದ್ದರೂ ಕೃಪೆಯ ಒಡಂಬಡಿಕೆಯ ಗುರುತಾದ ಸಬ್ಬತ್ತಿನ ಬಗ್ಗೆ ಆಕರ್ಷಣೆಯನ್ನು ಹುಟ್ಟಿಸುತ್ತದೆ.

ಅವರು ಸಬ್ಬತ್ತಿನಲ್ಲಿ ಯೇಸುಕ್ರಿಸ್ತನ ರಕ್ಷಣೆಯ ಸ್ವಾದವನ್ನು ಮುಂದಾಗಿ ಸವಿದರು. ನಾವು ವಿಮೋಚನೆಯು ಕೃಪೆಯಿಂದಲೇ ಒಡಂಬಡಿಕೆಯು ಕೃಪೆಯ ಒಡಂಬಡಿಕೆಯೇ ಎಂದು ಅರ್ಥಮಾಡಿಕೊಂಡಿರುವುದರಿಂದ ಸಬ್ಬತ್ತು, ವಿಮೋಚನೆ ಮತ್ತು ಒಡಂಬಡಿಕೆ ಇವುಗಳ ಪರಸ್ಪರ ಸಂಬಂಧವು ನಮಗೆ

ಸ್ಪಷ್ಟವಾಗಿದೆ (ಧ.ಕಾಂಡ 5:13–15 ನೋಡಿರಿ). ಹಾಗಾಗಿ, ಸಬ್ಬತ್ತು ದೇವರ ರಕ್ಷಣೆಯ ಕೃಪೆಗೆ ಗುರುತಾಗಿದೆಯಲ್ಲದೆ ಅದು 'ಕ್ರಿಯೆಗಳಿಂದ ರಕ್ಷಣೆಗೆ' ಗುರುತಾಗಿಲ್ಲ.

ಸಬ್ಬತ್ತಿನಲ್ಲಿ ವಿಶ್ರಾಂತಿ ಪಡೆದುಕೊಳ್ಳುವುದನ್ನು ಹೇಗೆ ಅರ್ಥಮಾಡಿಕೊಳ್ಳುವಿರಿ? ನೀವು ಸಬ್ಬತ್ತಿನಲ್ಲಿ ಹೇಗೆ ವಿಶ್ರಾಂತಿ ಹೊಂದುವಿರಿ? ಆ ದಿನವನ್ನು ಒಂದು ಗುರುತಾಗಿ ಮಾಡುವಂತಹ ಯಾವ ಭಿನ್ನವಾದ ಕೆಲಸವನ್ನು ನೀವು ಮಾಡುವಿರಿ? ನಿಮಗೆ ಪರಿಚಿತರಾದ ಒಬ್ಬ ವ್ಯಕ್ತಿಯು ನಿಮ್ಮ ಜೀವನವನ್ನು ನೋಡುವಾಗ ಸಬ್ಬತ್ತು ನಿಮಗೆ ಒಂದು ವಿಶೇಷವಾದ ದಿನವೆಂದು ತಿಳಿದುಕೊಳ್ಳುತ್ತಾರೆಯೆ?

**ಬುಧವಾರ** **ಮೇ 26**

## 'ಪರಿಶುದ್ಧತೆಯ ಗುರುತು'

'ನಾನು ನೇಮಿಸಿರುವ ಸಬ್ಬತ್ತು ದಿನಗಳನ್ನು ನೀವು ತಪ್ಪದೇ ಆಚರಿಸಬೇಕು. ನಿಮ್ಮನ್ನು ದೇವಜನರನ್ನಾಗಿ ಮಾಡಿರುವ ಯಹೋವನು ನಾನೇ ಎಂದು ನೀವು ತಿಳಿದುಕೊಳ್ಳುವಂತೆ ಇದೇ ನನಗೂ ನಿಮಗೂ ನಿಮ್ಮ ಸಂತತಿಯವರಿಗೂ ಇರುವ ಗುರುತು' (ವಿ.ಕಾಂಡ 31:13).

ಸಬ್ಬತ್ತನ್ನು ಕುರಿತು ವಿಮೋಚನಕಾಂಡ 31:12–17 ವಚನಗಳು ವಿಶೇಷವಾಗಿ ತಿಳಿಸುತ್ತವೆ. ದೇವರು ತನ್ನ ದರ್ಶನ ಗುಡಾರವನ್ನಾಗಿ ನಿರ್ಮಾಣ ಮಾಡಿ ಅದರಲ್ಲಿ ನಡೆಯುವ ಸೇವೆಗಳನ್ನು ಸ್ಥಾಪನೆ ಮಾಡಿಸಿದನು (ವಿ.ಕಾಂಡ 25:1 ರಿಂದ 31ನೇ ಅಧ್ಯಾಯ 11ನೇ ವಚನ). ಇದರ ನಂತರ ಸಬ್ಬತ್ತಿನ ಬಗ್ಗೆ ವಚನಗಳು ಆರಂಭವಾಗುತ್ತವೆ.

ಸಬ್ಬತ್ತೆಂಬ ಪರಿಕಲ್ಪನೆ ಗೋಚರವಾಗುವ, ಹೊರಗಿನ ಮತ್ತು ಶಾಶ್ವತವಾದ ದೇವರು ಮತ್ತು ಆತನ ಜನರ ನಡುವೆ ಇರುವ ಗುರುತಾಗಿದೆ. ಮೊಟ್ಟ ಮೊದಲಿಗೆ ಸಬ್ಬತ್ತನ್ನು ಹೀಗೆ ಕರೆಯಲಾಗಿದೆ.

ಈ ವಚನವು ಅಧ್ಯಯನ ಮಾಡತಕ್ಕ ಕೆಲವು ಆಸಕ್ತಿಕರವಾದ ಪರಿಕಲ್ಪನೆಗಳನ್ನು ಒಳಗೊಂಡಿದೆ.

ಎರಡು ಹೊಸ ಆಲೋಚನೆಗಳು ಒಟ್ಟಾಗಿ ಈ ವಚನದಲ್ಲಿ ಬಂದಿವೆ:

1. ಜ್ಞಾನದ ಗುರುತಾಗಿ ಸಬ್ಬತ್ತು.

2. ಪರಿಶುದ್ಧತೆಗೆ ಗುರುತಾಗಿ ಸಬ್ಬತ್ತು

ಸಬ್ಬತ್ತನ್ನು ಜ್ಞಾನಕ್ಕೆ ಸಂಬಂಧಪಟ್ಟ ಗುರುತಾಗಿ ಪರಿಗಣಿಸೋಣ. ಇಬ್ರಿಯ ಭಾಷೆಯಲ್ಲಿ ಜ್ಞಾನವು ವಿವೇಚನೆ, ಸಂಬಂಧ ಮತ್ತು ಭಾವನಾತ್ಮಕ ಅಂಶಗಳನ್ನು ಒಳಗೊಂಡಿದೆ. 'ಅರಿತುಕೊಳ್ಳಿ' ಎಂದರೆ ಅದರಲ್ಲೂ ಒಬ್ಬ ವ್ಯಕ್ತಿಯನ್ನು ಕುರಿತು ಹೇಳುವಾಗ ಕೇವಲ ಸಂಗತಿಗಳನ್ನು ತಿಳಿದುಕೊಳ್ಳುವುದಿಲ್ಲ. ಆ ವ್ಯಕ್ತಿಯೊಡನೆ ಅರ್ಥಪೂರ್ಣವಾದ ಸಂಬಂಧವನ್ನು ಹೊಂದಿರುವುದಕ್ಕೆ ಈ ಪದವನ್ನು ಉಪಯೋಗಿಸಬಹುದು. ನಿನ್ನ ದೇವರನ್ನು ಅರಿತುಕೊಂಡು ಎಂದರೆ ಆತನ ಜೊತೆ ಸರಿಯಾದ ಸಂಬಂಧವನ್ನು ಹೊಂದಿಕೊಂಡು ಆತನನ್ನು ಸೇವಿಸುವುದಾಗಿದೆ (1 ಪೂ.ವೃ.28:9). ಆತನಿಗೆ ಭಯಪಡುವುದಾಗಿದೆ (ಯೆಶಾಯ 11:2). ಆತನನ್ನು ನಂಬುವುದಾಗಿದೆ (ಯೆಶಾಯ 43:10). ಆತನಲ್ಲಿ ಭರವಸವಿಡುವುದಾಗಿದೆ ಮತ್ತು ಆತನಿಗೆ ಹಂಬಲಿಸುವುದಾಗಿದೆ (ಕೀರ್ತ 9:10). ಆತನ ನಾಮವನ್ನು ಉಚ್ಚರಿಸುವುದಾಗಿದೆ (ಯೆರೆ 10:25).

ಮೇಲಿನ ಪುಟಭಾಗದಲ್ಲಿರುವ ಪ್ರತಿಯೊಂದು ವಚನಗಳನ್ನು ನೋಡಿರಿ. ಈ ವಚನಗಳು ನಿನ್ನ ದೇವರನ್ನು 'ಅರಿತುಕೊಳ್ಳು'ವುದು ಅಂದರೆ ಏನು ಎಂಬುದನ್ನು ಅರ್ಥಮಾಡಿಕೊಳ್ಳುವುದು ಯಾವ ರೀತಿಯಲ್ಲಿ ಸಹಾಯ ಮಾಡುತ್ತವೆ?

ಇದರ ಜೊತೆಗೆ ಸಬ್ಬತ್ತು ಪರಿಶುದ್ಧತೆಗೂ ಗುರುತಾಗಿ ಮಹತ್ವವನ್ನು ಹೊಂದಿದೆ. ದೇವರು ತನ್ನ ಜನರನ್ನು ಶುದ್ಧಪಡಿಸುವುದನ್ನು ಸೂಚಿಸುತ್ತದೆ (ಯಾ.ಕಾಂಡ 20:8ನ್ನು ಹೋಲಿಸಿರಿ). ಅವರನ್ನು ಮೀಸಲಾದ (ಪರಿಶುದ್ಧ) ಜನಾಂಗವನ್ನಾಗಿ ಮಾಡಿದ್ದಾನೆ (ಧ.ಕಾಂಡ 7:6).

ಪರಿಶುದ್ಧಪಡಿಸುವ ಪ್ರಕ್ರಿಯೆಯು ದೇವರ ರಕ್ಷಣೆಯ ಮತ್ತು ವಿಮೋಚನೆಯ ಕೆಲಸದಂತೆಯೇ ದೇವರ ವಿಮೋಚಕ ಪ್ರೀತಿಯ ಕೆಲಸವಾಗಿದೆ. ನೀತಿ (ನೀತಿ ನಿರ್ಣಯ) ಮತ್ತು ಪರಿಶುದ್ಧಪಡಿಸುವಿಕೆ ಎರಡೂ ದೇವರು ನಡೆಸುವ ಕ್ರಿಯೆಗಳು: ನಾನು ನಿಮ್ಮ ದೇವರಾದ ............. ನಾನು ನಿಮ್ಮನ್ನು ಪರಿಶುದ್ಧಜನವಾಗುವಂತೆ

ಮಾಡುವ ಯೆಹೋವನು (ಯಾ.ಕಾಂಡ 20:8). ಹಾಗಾಗಿ ಸಬ್ಬತ್ತು ದೇವರನ್ನು ಪರಿಶುದ್ಧ ಮಾಡುವವನು ಎಂಬ ಜ್ಞಾನವನ್ನು ಹೊಂದಿಕೊಳ್ಳುವುದೂ ಆಗಿದೆ. ಲೋಕಕ್ಕೆ ದೇವರು ಸೃಷ್ಟಿಕರ್ತನು ಎಂದು ತಿಳಿಸುವುದಕ್ಕೆ ಗುರುತಾಗಿರುವಂತೆ ಆತನು ತನ್ನ ಜನರನ್ನು ಪರಿಶುದ್ಧಪಡಿಸುವವನು ಎಂಬುದಕ್ಕೂ ಗುರುತಾಗಿದೆ– ಎಲೆನ್ ಜಿ ವೈಟಮ್ಮನವರ ಟೆಸ್ಟಿಮೋನಿಸ್ ಫಾರ್ ದಿ ಚರ್ಚ್ 6ನೇ ಸಂಪುಟ, 350ನೇ ಪುಟ.

ಸಬ್ಬತ್ತಿನ ದಿನವನ್ನು ಮತ್ತು ಪರಿಶುದ್ಧಪಡಿಸುವ ಶುದ್ಧೀಕರಣೆಯ ಪ್ರಕ್ರಿಯೆಯನ್ನು ಪರಿಗಣಿಸೋಣ. ಸಬ್ಬತ್ತನ್ನು ಆಚರಣೆಗೆ ತರುವಾಗ ಈ ಪ್ರಕ್ರಿಯೆಯಲ್ಲಿ ಯಾವ ಪಾತ್ರವನ್ನು ಹೊಂದಿದೆ? ದೇವರು ಸಬ್ಬತ್ತನ್ನು ಕೈಗೊಳ್ಳುವ ನಮ್ಮ ಅನುಭವವನ್ನು ನಮ್ಮ ಶುದ್ಧೀಕರಣೆಗೆ ಹೇಗೆ ಉಪಯೋಗಿಸುತ್ತಾನೆ?

**ಗುರುವಾರ** **ಮೇ 27**

## ಸಬ್ಬತ್ತನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು

ಸಬ್ಬತ್ ದಿನವನ್ನು ದೇವರ ದಿನವೆಂದು ಆಚರಣೆಗೆ ತರುವುದಕ್ಕೆ ಜ್ಞಾಪಕದಲ್ಲಿಟ್ಟುಕೊಳ್ಳಬೇಕು (ಆ.ಕಾಂಡ 20:8).

ಸಬ್ಬತ್ತು ಮನುಷ್ಯರು ಜ್ಞಾಪಕದಲ್ಲಿಟ್ಟುಕೊಳ್ಳಬೇಕಾದ ಗುರುತಾಗಿತ್ತು ಮತ್ತು ಗುರುತಾಗಿದೆ. ಜ್ಞಾಪಕದಲ್ಲಿಟ್ಟುಕೊಳ್ಳಬೇಕು ಎಂಬ ಪದವು ಅನೇಕ ಕಾರ್ಯಗಳನ್ನು ನಿರ್ವಹಿಸುವುದಾಗಿದೆ. ಮೊದಲಿಗೆ ಜ್ಞಾಪಕದಲ್ಲಿಟ್ಟುಕೊಳ್ಳುವುದು ಎಂದರೆ ಹಿಂದೆ ನಡೆದ ಕಾರ್ಯವನ್ನು ಹಿಂದಿರುಗಿ ನೋಡುವುದನ್ನು ಸೂಚಿಸುತ್ತದೆ. ಈ ಸಂದರ್ಭದಲ್ಲಿ ಸಬ್ಬತ್ತು ಆದೇಶಪೂರ್ವಕ ಸೃಷ್ಟಿಕಾರ್ಯವನ್ನು ನಮಗೆ ಸೂಚಿಸುತ್ತದೆ (ಅಂದರೆ ದೇವರು ಹಾಗಾಗಲಿ ಎಂದು ನುಡಿದ ಮಾತ್ರಕ್ಕೆ ಸೃಷ್ಟಿಯ ಕಾರ್ಯಗತವಾಗುತ್ತಿತ್ತು). ಇದರ ಪರಾಕಾಷ್ಠತೆಯು ದೇವರ ಜೊತೆ ವಿಶೇಷವಾದ ಅನ್ಯೋನ್ಯತೆ ಹೊಂದಲು ಸ್ಥಾಪಿಸಲ್ಪಟ್ಟ ಏಳನೇ ದಿನದ ವಿಶ್ರಾಂತಿ (ಸಬ್ಬತ್ತು) ದಿನವಾಗಿದೆ.

'ಜ್ಞಾಪಕದಲ್ಲಿಟ್ಟುಕೊಳ್ಳಬೇಕು' ಎಂಬ ನಿಬಂಧನೆಯು ಇಂದಿನ ಕಾಲಕ್ಕೆ ಪ್ರಸ್ತುತವಾಗಿದೆ. ನಾವು ಸಬ್ಬತ್ತಿನ ದಿನವನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ಮಾತ್ರವಲ್ಲ

(ವಿ.ಕಾಂಡ 20:8) ನಾವು ಅದನ್ನು ಆಚರಣೆಗೆ ತರಬೇಕು ಇಲ್ಲವೇ ಕೈಗೊಳ್ಳಬೇಕು (ಧ.ಕಾಂಡ 5:12ನ್ನು ನೋಡಿರಿ). ಹಾಗಾಗಿ ಸಬ್ಬತ್ತು ಮುಖ್ಯವಾಗಿ ಈ ಕಾಲಕ್ಕೆ ಹೆಚ್ಚು ಪ್ರಸ್ತುತವಾಗಿದೆ.

ಕಡೆಯದಾಗಿ ಸಬ್ಬತ್ತನ್ನು ಜ್ಞಾಪಕದಲ್ಲಿಟ್ಟುಕೊಳ್ಳುವುದು ನಮ್ಮನ್ನು ಭವಿಷ್ಯದ ಕಡೆಗೆ ನೋಡುವಂತೆ ಮಾಡುತ್ತದೆ. ಸಬ್ಬತ್ತನ್ನು ಕೈಗೊಂಡು ನಡೆಯುವವನಿಗೆ ಸಬ್ಬತ್ತಿನ ಒಡೆಯನಾದ ದೇವರೊಂದಿಗೆ ಸಮೃದ್ಧವಾದ ಮತ್ತು ಅರ್ಥಪೂರ್ಣವಾದ ಭವಿಷ್ಯದ ಭರವಸೆ ಇರುತ್ತದೆ. ಆತನಾಗಲೀ ಇಲ್ಲವೇ ಆಕೆಯಾಗಲೀ ದೇವರೊಂದಿಗೆ ಉಳಿಯುವುದರಿಂದ ಅವರು ಒಡಂಬಡಿಕೆಯ ಸಂಬಂಧದಲ್ಲಿಯೂ ಉಳಿದಿರುತ್ತಾರೆ.

ಒಡಂಬಡಿಕೆಯು ದೇವರ ಮತ್ತು ಮನುಷ್ಯರ ನಡುವಿನ ಸಂಬಂಧವೆಂದು ಅರ್ಥಮಾಡಿಕೊಂಡಾಗ ಸಬ್ಬತ್ತು ಈ ಸಂಬಂಧವನ್ನು ಗಟ್ಟಿಗೊಳಿಸಲು ದೊಡ್ಡದಾಗಿ ಸಹಾಯ ಮಾಡುತ್ತದೆ. ನಿಜವಾಗಿ, ಸೃಷ್ಟಿಯನ್ನೂ ಸೃಷ್ಟಿಕರ್ತನನ್ನು ನೆನೆಯುವಲ್ಲಿ ದೇವಜನರು ದೇವರು ಮಾಡಿದ ಕೃಪಾಪೂರ್ಣವಾದ ರಕ್ಷಣೆಯ ಕ್ರಿಯೆಗಳನ್ನೂ ನೆನೆಯುತ್ತಾರೆ (ನೋಡಿರಿ, ಧರ್ಮೋಪದೇಶಕಾಂಡ 5:14, ಈ ಸಂದರ್ಭದಲ್ಲಿ ಸಬ್ಬತ್ತು ಐಗುಪ್ತ ದೇಶದ ದಾಸತ್ವದಿಂದ ವಿಮೋಚನೆ ಪಡೆದುಕೊಂಡುದಕ್ಕೆ ಗುರುತಾಗಿ ಕಾಣುತ್ತದೆ. ಇದು ನಮ್ಮ ರಕ್ಷಣೆಯು ಅಂತಿಮವಾಗಿ ದೇವರಲ್ಲಿ ನೆಲೆಯಾಗಿರುವುದಕ್ಕೆ ಒಂದು ಸಂಕೇತವಾಗಿದೆ). ಸೃಷ್ಟಿ ಮತ್ತು ಮರುಸೃಷ್ಟಿ ಒಂದಕ್ಕೊಂದು ಸಂಬಂಧಪಡುತ್ತದೆ. ಸೃಷ್ಟಿಯು ಮರುಸೃಷ್ಟಿಯನ್ನು ಸಾಧ್ಯ ಮಾಡುತ್ತದೆ. ಸಬ್ಬತ್ತು ದೇವರು ಈ ಲೋಕದ ಸೃಷ್ಟಿಕರ್ತನು ಮತ್ತು ನಮ್ಮ ರಕ್ಷಣೆಯ ಕರ್ತನು ಎಂಬುದನ್ನು ಅರುಹುವ ಗುರುತಾಗಿದೆ.

"ಸಬ್ಬತ್ತನ್ನು ಪರಿಶುದ್ಧವಾಗಿ ಕೈಗೊಂಡು ನಾವು ಆತನ ಜನರು ಎಂಬುದನ್ನು ತೋರಿಸಬೇಕು. ಸಬ್ಬತ್ತು ಜನರನ್ನು ದೇವರ ಆಜ್ಞೆಗಳನ್ನು ಕೈಗೊಂಡು ನಡೆಯುವ ಜನರೆಂದು ಪ್ರತ್ಯೇಕಪಡಿಸುವ ಗುರುತಾಗಿದೆಯೆಂದು ಆತನ ವಾಕ್ಯವು ಘೋಷಿಸುತ್ತದೆ. ದೇವರ ವಾಕ್ಯವು ಸಬ್ಬತ್ತು ಆಜ್ಞೆಗಳನ್ನು ಕೈಗೊಂಡು ನಡೆಯುವ ಜನರನ್ನು ಪ್ರತ್ಯೇಕಪಡಿಸುವ ಗುರುತೆಂಬುದಾಗಿ ಸಾಗುತ್ತದೆ... ಯಾರು ದೇವರ

ನ್ಯಾಯಪ್ರಮಾಣವನ್ನು ಕೈಗೊಳ್ಳುತ್ತಾರೋ ಅವರು ಪರಲೋಕದಲ್ಲಿ ಸೈತಾನ ಮತ್ತು ದೇವರ ನಡುವೆ ಆರಂಭಗೊಂಡ ಮಹಾವಿರಸದಲ್ಲಿ ದೇವರ ಸಂಗಡ ನಿಲ್ಲುತ್ತಾರೆ" – ಎಲೆನ್ ಜಿ ವೈಟಮ್ಮನವರ ಆಯ್ದ ಸಂದೇಶಗಳು 2ನೇ ಪುಸ್ತಕ 160ನೇ ಪುಟ.

ದೇವರ ಸೇವಕನಿಂದ ಬಂದ ಈ ಹೇಳಿಕೆಯನ್ನು ಗಮನಿಸಿರಿ. ಬಹುಶಃ ಇನ್ನಿತರ ಎಲ್ಲಾ ಆಜ್ಞೆಗಳಿಗಿಂತ ನಮ್ಮನ್ನು ಆಜ್ಞೆಗಳನ್ನು ಕೈಗೊಂಡು ನಡೆವ ಜನರೆಂದು ಪ್ರತ್ಯೇಕಪಡಿಸುವಂಥದ್ದು ಸಬ್ಬತ್ತಿನಲ್ಲೇನಿದೆ?

**ಶುಕ್ರವಾರ** **ಮೇ 28**

**ಹೆಚ್ಚಿನ ಚಿಂತನೆ :** ಎಲೆನ್ ಜಿ ವೈಟಮ್ಮನವರ ಎಸ್.ಡಿ.ಎ. ಸತ್ಯವೇದ ವ್ಯಾಖ್ಯಾನ 7ನೇ ಸಂಪುಟದಲ್ಲಿ ಪುಟ 968–970; ಸಭೆಗೆ ಸಾಕ್ಷ್ಯಗಳು 6ನೇ ಸಂಪುಟ 'ಸಬ್ಬತ್ತಿನ ಆಚರಣೆ' ಪುಟ 349 ರಿಂದ 351; 'ನಮ್ಮ ಪಿತೃಗಳು ಮತ್ತು ಪ್ರವಾದಿಗಳು' ಪುಸ್ತಕದಲ್ಲಿ "ಕೆಂಪು ಸಮುದ್ರದಿಂದ ಸಿನಾಯಿ ಬೆಟ್ಟದವರೆಗೆ" ಪುಟ 295 ರಿಂದ 297.

ಹತ್ತು ಕಟ್ಟಳೆಗಳು (ದಶಾಜ್ಞೆಗಳು) ದೇವರು–ಮನುಷ್ಯ ಮತ್ತು ಮನುಷ್ಯ–ಮನುಷ್ಯನ ನಡುವಿನ ಸಂಬಂಧಗಳನ್ನು ಸಮಗ್ರವಾಗಿ ಮತ್ತು ಮೂಲಭೂತವಾಗಿ ವ್ಯಾಖ್ಯಾನಿಸುತ್ತವೆ. ಹತ್ತು ಕಟ್ಟಳೆಗಳ ಮಧ್ಯದಲ್ಲಿರುವುದು ಸಬ್ಬತ್ತಿನ ಕಟ್ಟಳೆಯಾಗಿದೆ. ಇದು ಸಬ್ಬತ್ತಿನ ಒಡೆಯನನ್ನು ವಿಶೇಷವಾಗಿ ಗುರುತಿಸುತ್ತದೆ ಮತ್ತು ಆತನ ಅಧಿಕಾರ ಹಾಗೂ ಯಜಮಾನಿಕೆಯನ್ನು ಸೂಚಿಸುತ್ತದೆ. ಈ ಎರಡು ಅಂಶಗಳನ್ನು ಗಮನಿಸಿ (1) ದೈವವನ್ನು ಗುರುತಿಸುವುದು: ಯಾಹು (ಕರ್ತನು) ಆತನು ವಿಶಿಷ್ಟ ಸ್ಥಾನವನ್ನು ಹೊಂದಿದವನು (2) ಆತನ ಅಧಿಕಾರ ಮತ್ತು ಯಜಮಾನಿಕೆಯ ವ್ಯಾಪ್ತಿ– ಭೂಮ್ಯಾಕಾಶಗಳು ಸಮುದ್ರ ಮತ್ತು ಅವುಗಳಲ್ಲಿರುವ ಸಮಸ್ತವೂ (ವಿ.ಕಾಂಡ 20:11ನ್ನು ವಿ.ಕಾಂಡ 31:17ಕ್ಕೆ ಹೋಲಿಸಿರಿ). ಈ ಎರಡು ಅಂಶಗಳಲ್ಲಿ ಸಬ್ಬತ್ತಿನ ಆಜ್ಞೆಯು ಪೂರ್ವದೇಶಗಳ ಪುರಾತನ ದಾಖಲೆಗಳು ಹೊಂದಿರುತ್ತಿದ್ದ ಮುದ್ರೆಯ ಮಾದರಿಯನ್ನು (ಲಕ್ಷಣಗಳನ್ನು) ಹೊಂದಿದೆ. ಈ ಮುದ್ರೆಗಳು ಒಪ್ಪಂದದ ದಾಖಲೆಯ ಮಧ್ಯೆ ಭಾಗದಲ್ಲಿ ಒತ್ತಲ್ಪಡುತ್ತಿದ್ದವು ಮತ್ತು

ಇವು (1) ದೈವದ ಗುರುತು (ಸಾಮಾನ್ಯವಾಗಿ ಅನ್ಯದೇವತೆ) (2) ಒಡೆತನದ ಮತ್ತು ಅಧಿಕಾರದ ವ್ಯಾಪ್ತಿ (ಸಾಮಾನ್ಯವಾಗಿ ಭೌಗೋಳಿಕ ಕ್ಷೇತ್ರಕ್ಕೆ ಪರಿಮಿತಿಗೊಳ್ಳುತ್ತಿತ್ತು).

ಆತ್ಮೀಕ ಶುದ್ಧೀಕರಣೆಯು ದೇವರ ಮುದ್ರೆಯನ್ನು ಹೊಂದಿದವರ ಮತ್ತು ಮಿಥ್ಯವಾದ ವಿಶ್ರಾಂತಿ ದಿನವನ್ನು ಆಚರಿಸುವವರ ನಡುವೆ ಇರುವ ವ್ಯತ್ಯಾಸವನ್ನು ಎತ್ತಿ ತೋರಿಸುತ್ತದೆ. ಪರೀಕ್ಷೆ ಬಂದಾಗ ಮೃಗದ ಗುರುತು ಸ್ಪಷ್ಟವಾಗಿ ತೋರಿ ಬರುತ್ತದೆ. ಆ ಗುರುತು ಯಾವುದೆಂದರೆ ಭಾನುವಾರದ ಆಚರಣೆ ........ ದೇವರು ಏಳನೇ ದಿನವನ್ನು ಸಬ್ಬತ್ ದಿನವನ್ನಾಗಿ ನೇಮಿಸಿದ್ದಾನೆ (ಯಾ.ಕಾಂಡ 31:13,17).

"ಹಾಗಾಗಿ ನಿಷ್ಠರಿಗೂ ನಿಷ್ಠರಲ್ಲದವರಿಗೂ ನಡುವೆ ಗೆರೆಯನ್ನು ಎಳೆಯಲಾಗುತ್ತದೆ. ದೇವರ ಮುದ್ರೆಯನ್ನು ತಮ್ಮ ಹಣೆಯ ಮೇಲೆ ಒತ್ತಿಕೊಳ್ಳ ಬಯಸುವವರು ನಾಲ್ಕನೆ ಆಜ್ಞೆಯಾದ ಸಬ್ಬತ್ ದಿನವನ್ನು ಕೈಗೊಂಡು ನಡೆಯಬೇಕು"– ಎಲೆನ್ ಜಿ ವೈಟಮ್ಮನವರ ವ್ಯಾಖ್ಯೆ, ಎಸ್.ಡಿ.ಎ. ಸತ್ಯವೇದ ವ್ಯಾಖ್ಯಾನ 7ನೇ ಸಂಪುಟ, ಪುಟ 980, 981.

## ಆರೋಗ್ಯದ ಲೇಖನಮಾಲೆ
## ಒಂಭತ್ತನೇ ವಾರ

### * ಗಿಯಾರ್ಡಿಯಾಸಿಸ್

(ಗಿಯಾರ್ಡಿಯಾಸಿಸ್ ಎಂಬ ಪದಕ್ಕೆ ಕನ್ನಡದಲ್ಲಿ ಸಮಾನಾಂತರ ಪದವಿಲ್ಲ). ನಮ್ಮ ಬರಿಗಣ್ಣಿಗೆ ಕಾಣದಂತ ಅತಿಸೂಕ್ಷ್ಮವಾದ ಪ್ರಾಣಿಗಳಿವು. ಅವು ಪರೋಪ ಜೀವಿಗಳು. ಅವುಗಳಿಂದ ಸೆಡೆತ, ಭೇದಿ, ಹೊಟ್ಟೆ ಉಬ್ಬರಿಸುವುದು ಮತ್ತು ದುರ್ವಾಸನೆಯ ವಾಯುವಿನ ತೊಂದರೆ ಉಂಟಾಗುತ್ತದೆ.

**ಕಂಡು ಹಿಡಿಯುವುದು ಹೇಗೆ?**

1. ದುರ್ವಾಸನೆಯಿಂದ ಕೂಡಿದ ಹಾಗೂ ಲೋಳೆ ಲೋಳೆಯಾದ ಭೇದಿ.
2. ಹೊಟ್ಟೆಯಲ್ಲಿ ಸೆಡೆತ, ಆದರೆ ಜ್ವರವಿಲ್ಲ.
3. ಆಗಾಗ ವಾಯು ಹೋಗುವುದು.

**ಕಾರಣವೇನು?**

1. ಅಶುದ್ಧ ನೀರು, ಬಿಸಿ ಮಾಡದ ಹಾಲು
2. ಮಾನವನ ಮಲದಿಂದ ಮಲಿನವಾದ ತರಕಾರಿಗಳು

**ಏನು ಮಾಡಬೇಕು?**

ಇಂತಹ ಸೋಂಕು ಸಾಧಾರಣವಾಗಿ ತಾನೇ ವಾಸಿಯಾಗುತ್ತದೆ. ಆದರೆ ಕೆಳಗಿನ ಸೂಚನೆ ಪಾಲಿಸಿದರೆ ಉತ್ತಮ.

1. ಒಂದು ದಿನ ಊಟಬಿಟ್ಟು ಮೊಸರು ಮತ್ತು ಬಾಳೆಹಣ್ಣು ಮಾತ್ರ ತಿನ್ನುವುದು.
2. ಸಾಕಷ್ಟು ನೀರು ಕುಡಿಯಿರಿ. ವೈದ್ಯರನ್ನು ಅಗತ್ಯವಿದ್ದಲ್ಲಿ ಭೇಟಿ ಮಾಡಿ.

## * ಚಿಕೂನ್‌ಗುನ್ಯಾ

**ಚಿಕೂನ್ ಗುನ್ಯಾ ಎಂದರೇನು?**

ಸೊಳ್ಳೆಗಳ ಕಡಿತದಿಂದಾದ ಒಂದು ರೀತಿಯ ಸೋಂಕು

**ಗುರುತಿಸುವುದು ಹೇಗೆ?**

1. ಮೂರು ನಾಲ್ಕು ದಿನಗಳವರೆಗೆ ಅಧಿಕ ಜ್ವರ.
2. ಕೈಬೆರಳುಗಳು, ಮಣಿಕಟ್ಟು, ಭುಜ ಅಥವಾ ಮಂಡಿಯ ಕೀಲುಗಳ ನೋವು.

**ಕಾರಣ**

ಸೊಳ್ಳೆಗಳ ಕಡಿತ

**ಏನು ಮಾಡಬೇಕು?**

1. ಹಣೆಗೆ ತಣ್ಣೀರು ಹಾಗೂ ಬಿಸಿನೀರಿನ ಬಟ್ಟೆಯಿಂದ ಒದ್ದೆ ಮಾಡಿ ಜ್ವರ ಕಡಿಮೆ ಮಾಡಬೇಕು.
2. ಮಲಗುವಾಗ ಸೊಳ್ಳೆಪರದೆ ಬಳಸಿ.
3. ಇದರ ತೊಂದರೆಯು 3–6 ತಿಂಗಳವರೆಗೆ ಇರುವುದರಿಂದ ದೇವರಿಂದ ಶಕ್ತಿಗಾಗಿ ಪ್ರಾರ್ಥಿಸಿ.
4. ಕೀಲುಗಳ ನೋವಿನ ನಿಯಂತ್ರಣಕ್ಕೆ ಮಂಜುಗಡ್ಡೆ ಇಟ್ಟು ಅಂಗಮರ್ದನ (ಮಸಾಜ್) ಮಾಡಿ.